ಕರ್ನಾಟಕ ವಿಧಾನಸಭೆ
ಹದಿನಾರನೇ ವಿಧಾನಸಭೆ
ಎಂಟನೇ ಅಧಿವೇಶನ

# ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–82)**

ರಾಜ್ಯದಲ್ಲಿ ಒಬ್ಬ ವ್ಯಕ್ತಿ ಅಥವಾ ಅವನ ಕುಟುಂಬ ಸದಸ್ಯರನ್ನೂ ಒಳಗೊಂಡಂತೆ ವ್ಯಕ್ತಿಗಳ ಗುಂಪಿನ ಸಾಮಾಜಿಕ ಬಹಿಷ್ಕಾರವನ್ನು ನಿಷೇಧಿಸಲು ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳನ್ನು ಉಪಬಂಧಿಸುವುದಕ್ಕಾಗಿ ಒಂದು ವಿಧೇಯಕ;

ಭಾರತ ಸಂವಿಧಾನದ ಪ್ರಸ್ತಾವನೆಯಲ್ಲಿ ಒಂದು ಗುರಿಯಾಗಿ ಪ್ರತಿಷ್ಠಾಪಿಸಲಾದ ವ್ಯಕ್ತಿ ಘನತೆಯನ್ನು ಖಾತ್ರಿಪಡಿಸಿ, ನಾಗರೀಕರಲ್ಲಿ ಭ್ರಾತೃತ್ವವನ್ನು ಉತ್ತೇಜಿಸಲಾಗಿರುವುದರಿಂದ;

ಮತ್ತು ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿನ ಸಾಮಾಜಿಕ ಬಹಿಷ್ಕಾರವು ಸಂವಿಧಾನದ ಭಾಗ-IIIರಲ್ಲಿ ಪ್ರತಿಷ್ಠಾಪಿಸಲಾದ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುವುದರಿಂದ;

ಮತ್ತು ರಾಜ್ಯದ ಕೆಲವು ಭಾಗಗಳಲ್ಲಿ ಅವರ ಕುಟುಂಬ ಸದಸ್ಯರನ್ನೂ ಒಳಗೊಂಡಂತೆ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿನ ಸಾಮಾಜಿಕ ಬಹಿಷ್ಕಾರದ ಅಮಾನವೀಯ ಪದ್ಧತಿಯು ಇನ್ನೂ ಉಳಿದಿರುವುದನ್ನು ಗಮನಿಸಲಾಗಿರುವುದರಿಂದ;

ಮತ್ತು ಅವರ ಕುಟುಂಬ ಸದಸ್ಯರನ್ನೂ ಒಳಗೊಂಡಂತೆ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿನ ಸಾಮಾಜಿಕ ಬಹಿಷ್ಕಾರದ ಪಿಡುಗನ್ನು ಸಂಪೂರ್ಣವಾಗಿ ತೆಗೆದುಹಾಕುವಲ್ಲಿ ಈಗಾಗಲೇ ಇರುವ ಕಾನೂನುಗಳು ಪರಿಣಾಮಕಾರಿಯಲ್ಲವೆಂದು ಸಾಬೀತಾಗಿರುವುದು ಕಂಡುಬಂದಿರುವುದರಿಂದ;

ಮತ್ತು ಸಾರ್ವಜನಿಕ ಕ್ಷೇಮಾಭಿವೃದ್ಧಿಯ ಹಿತಾಸಕ್ತಿಯಲ್ಲಿ ಸಾಮಾಜಿಕ ಸುಧಾರಣೆಯ ವಿಷಯವಾಗಿ ಸಾಮಾಜಿಕ ಬಹಿಷ್ಕಾರವನ್ನು ನಿಷೇಧಿಸುವುದು ಅಗತ್ಯವಾಗಿರುವುದರಿಂದ;

ಹಾಗೂ ರಾಜ್ಯದಲ್ಲಿ ಜನರು ಅವರ ಮಾನವ ಹಕ್ಕುಗಳೊಂದಿಗೆ ಸೌಹಾರ್ದದಿಂದ ಬದುಕುವುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ, ಅವರ ಕುಟುಂಬ ಸದಸ್ಯರನ್ನೂ ಒಳಗೊಂಡಂತೆ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿನ ಸಾಮಾಜಿಕ ಬಹಿಷ್ಕಾರವನ್ನು ನಿಷೇಧಿಸಲು ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳನ್ನು ಉಪಬಂಧಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಈ ಕುರಿತು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "**ಜಾತಿ ಪಂಚಾಯತಿ**" ಎಂದರೆ ಅದೇ ಸಮುದಾಯದಲ್ಲಿನ ಹಲವು ಪದ್ಧತಿಗಳನ್ನು ನಿಯಂತ್ರಿಸಲು ಸಮುದಾಯದೊಳಗೆ ಕಾರ್ಯನಿರ್ವಹಿಸುವ, ಯಾರೇ ಸದಸ್ಯನ ವೈಯಕ್ತಿಕ ಮತ್ತು ಸಾಮಾಜಿಕ ನಡವಳಿಕೆಯನ್ನು ನಿಯಂತ್ರಿಸುವ ಹಾಗೂ ಅವರ ಕುಟುಂಬಗಳನ್ನೂ ಒಳಗೊಂಡಂತೆ ಅದರ ಸದಸ್ಯರ ಪೈಕಿ ಯಾವುದೇ ವಿವಾದಗಳನ್ನು ಮೌಖಿಕ ಅಥವಾ ಲಿಖಿತವಾದ ವಿಧ್ಯುಕ್ತ ಹೇಳಿಕೆಗಳ (dictum) ಮೂಲಕ ಒಟ್ಟಾಗಿ ಪರಿಹರಿಸುವ ಅಥವಾ ನಿರ್ಧರಿಸುವ, "ಪಂಚಾಯತಿ" ಅಥವಾ ಯಾವುದೇ ಇತರ ಹೆಸರು ಅಥವಾ ವಿವರಣೆಯಿಂದ ಕರೆಯಲಾಗುವ ನೋಂದಾಯಿತ ಅಥವಾ ನೋಂದಾಯಿತವಲ್ಲದ, ಔಪಚಾರಿಕ ಅಥವಾ ಅನೌಪಚಾರಿಕವಾದ ಯಾವುದೇ ಸಮುದಾಯಕ್ಕೆ ಸೇರಿರುವ ವ್ಯಕ್ತಿಗಳ ಗುಂಪಿನ ಮೂಲಕ ರಚಿಸಲಾದ ಸಮಿತಿ ಅಥವಾ ನಿಕಾಯ;

(ಬಿ) "**ಸಮುದಾಯ**" ಎಂಬುದು ಜಾತಿ ಪಂಚಾಯತಿಗೆ ಸಂಬಂಧಿಸಿದಂತೆ, ಹುಟ್ಟು, ಪರಿವರ್ತನೆ ಅಥವಾ ಯಾವುದೇ ಧಾರ್ಮಿಕ ವಿಧಿವಿಧಾನಗಳ ಅಥವಾ ಉತ್ಸವಗಳ ಆಚರಣೆ, ಅವರು ಸೇರಿರುವ ಅದೇ ಧರ್ಮ ಅಥವಾ ಧಾರ್ಮಿಕ ಪಂಥ, ಜಾತಿ ಅಥವಾ ಉಪಜಾತಿಯ ಕಾರಣದಿಂದಾಗಿ ಒಟ್ಟಿಗೆ ಸೇರುವ ಸದಸ್ಯರ ಗುಂಪು;

(ಸಿ) "**ಸಾಮಾಜಿಕ ಬಹಿಷ್ಕಾರ**" ಎಂದರೆ 3ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಮುದಾಯದ ಸದಸ್ಯರ ನಡುವೆ ಯಾವುದೇ ಸಾಮಾಜಿಕ ತಾರತಮ್ಯದ ಕುರಿತು ಮೌಖಿಕವಾದ ಅಥವಾ ಲಿಖಿತವಾದ ಪರೋಕ್ಷ ಸೂಚನೆ (gesture) ಅಥವಾ ಕೃತ್ಯ;

(ಡಿ) "**ಸರ್ಕಾರ**" ಎಂದರೆ ಕರ್ನಾಟಕ ಸರ್ಕಾರ;

(ಇ) "**ಮಾನವ ಹಕ್ಕುಗಳು**" ಎಂಬುದು ಮಾನವ ಹಕ್ಕುಗಳ ರಕ್ಷಣೆ ಅಧಿನಿಯಮ, 1993 (1994ರ ಕೇಂದ್ರ ಅಧಿನಿಯಮ 10)ರ 2ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿನ (ಡಿ) ಖಂಡದಲ್ಲಿ ಅದಕ್ಕೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು;

(ಎಫ್) "**ಸದಸ್ಯ**" ಎಂದರೆ ಯಾವುದೇ ಸಮುದಾಯದ ಸದಸ್ಯನಾಗಿರುವ ಒಬ್ಬ ವ್ಯಕ್ತಿ;

(ಜಿ) "**ನಿಯಮಿಸಲಾದುದು**" ಎಂದರೆ ಈ ಅಧಿನಿಯಮದ ಅಡಿಯಲ್ಲಿ ನಿಯಮಗಳ ಮೂಲಕ ನಿಯಮಿಸಲಾದುದು;

(ಎಚ್) "**ಸಾಮಾಜಿಕ ಬಹಿಷ್ಕಾರ ನಿಷೇಧ ಅಧಿಕಾರಿ**" ಎಂದರೆ 15ನೇ ಪ್ರಕರಣದಡಿ ಹಾಗೆ ಗೊತ್ತುಪಡಿಸಿದ ಅಧಿಕಾರಿ; ಮತ್ತು

(ಐ) "**ಸಂತ್ರಸ್ತ**" ಎಂದರೆ ಸಾಮಾಜಿಕ ಬಹಿಷ್ಕಾರ ಮಾಡಿರುವ ಕಾರಣದಿಂದಾಗಿ ತೊಂದರೆಗೊಳಗಾದ ಅಥವಾ ದೈಹಿಕವಾದ ಅಥವಾ ಹಣಕಾಸಿನ ತೊಂದರೆ ಅಥವಾ ಆತನ ಸ್ವತ್ತಿಗೆ ತೊಂದರೆಯನ್ನು ಅನುಭವಿಸಿದ

ವ್ಯಕ್ತಿ ಮತ್ತು ಆತನ ಸಂಬಂಧಿಕರು, ಕಾನೂನುಬದ್ಧ ಪೋಷಕರು ಮತ್ತು ಕಾನೂನುಬದ್ಧ ವಾರಸುದಾರರನ್ನು ಒಳಗೊಳ್ಳುವುದು.

(2) ಈ ಅಧಿನಿಯಮದಲ್ಲಿ ಬಳಸಲಾದ ಆದರೆ ಪರಿಭಾಷಿಸದಿರುವ ಪದಗಳು ಮತ್ತು ಪದಾವಳಿಗಳು ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45), ಭಾರತೀಯ ಸಾಕ್ಷ್ಯ ಅಧಿನಿಯಮ, 2023 (2023ರ ಕೇಂದ್ರ ಅಧಿನಿಯಮ 47), ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46), ಅಥವಾ ಸಂದರ್ಭಾನುಸಾರ ಮಾನವ ಹಕ್ಕುಗಳ ರಕ್ಷಣೆ ಅಧಿನಿಯಮ, 1993 (1994ರ ಕೇಂದ್ರ ಅಧಿನಿಯಮ 10)ರಲ್ಲಿ ಅನುಕ್ರಮವಾಗಿ ಅವುಗಳಿಗೆ ಆ ಅಧಿನಿಯಮತಿಗಳಲ್ಲಿ ನೀಡಲಾದ ಅರ್ಥಗಳನ್ನು ನೀಡಲಾಗಿದೆಯೆಂದು ಭಾವಿಸತಕ್ಕದ್ದು.

**3. ಸಾಮಾಜಿಕ ಬಹಿಷ್ಕಾರ.-** ಜಾತಿ ಪಂಚಾಯತಿಯ ತೀರ್ಮಾನದ ಅನುಸಾರ ಯಾರೇ ಸದಸ್ಯನು ಆತನ ಸಮುದಾಯದ ಇನ್ನೊಬ್ಬ ಸದಸ್ಯನ ಮೇಲೆ ಈ ಮುಂದಿನ ಯಾವುದೇ ಕೃತ್ಯವನ್ನು ಎಸಗಿದರೆ, ಸಾಮಾಜಿಕ ಬಹಿಷ್ಕಾರವನ್ನು ಹೇರಿದನೆಂದು ಭಾವಿಸತಕ್ಕದ್ದು, ಆತನು,-

(i) ಇನ್ನೊಬ್ಬ ವ್ಯಕ್ತಿಯೊಂದಿಗೆ ವ್ಯವಹರಿಸಲು, ಬಾಡಿಗೆಗಾಗಿ ಕೆಲಸ ನಿರ್ವಹಿಸಲು ಅಥವಾ ವ್ಯಾಪಾರ ಮಾಡಲು ನಿರಾಕರಿಸುವುದು; ಅಥವಾ

(ii) ಪ್ರತಿಫಲಕ್ಕಾಗಿ ಸೇವೆಯನ್ನು ಸಲ್ಲಿಸುವುದಕ್ಕೆ ಸೇವೆಗಳನ್ನು ನೀಡುವ ಅಥವಾ ಒಪ್ಪಂದ ಅವಕಾಶಗಳನ್ನು ಒಳಗೊಂಡ ಸದವಕಾಶಗಳನ್ನು ನಿರಾಕರಿಸುವುದು; ಅಥವಾ

(iii) ಸಹಜ ವ್ಯಾವಹಾರಿಕ ಕ್ರಮದಲ್ಲಿ ಸಾಮಾನ್ಯವಾಗಿ ಮಾಡಲಾದ ವಿಷಯಗಳ ಮೇಲಿನ ಯಾವುದೇ ನಿಬಂಧನೆಗಳನ್ನು ನಿರಾಕರಿಸುವುದು; ಅಥವಾ

(iv) ಇತರ ವ್ಯಕ್ತಿಯೊಂದಿಗೆ ನಿರ್ವಹಿಸಲಾಗುವ ವೃತ್ತಿಪರ ಅಥವಾ ವ್ಯಾವಹಾರಿಕ ಸಂಬಂಧಗಳಿಂದ ವಿಮುಖನಾಗುವುದು; ಅಥವಾ

(v) ಆತನ ಸಮುದಾಯದ ಯಾರೇ ಸದಸ್ಯನನ್ನು ಯಾವುದೇ ಸಾಮಾಜಿಕ ಅಥವಾ ಧಾರ್ಮಿಕ ಪದ್ಧತಿ, ಆಚರಣೆ ಅಥವಾ ಸಮಾರಂಭವನ್ನು ಆಚರಿಸುವುದರಿಂದ ಅಥವಾ ಸಾಮಾಜಿಕ, ಧಾರ್ಮಿಕ ಅಥವಾ ಸಾಮುದಾಯಿಕ ಕಾರ್ಯಕ್ರಮಗಳು, ಸಮಾರಂಭ, ಸಮಾವೇಶ, ಸಭೆ ಅಥವಾ ಮೆರವಣಿಗೆಗಳಲ್ಲಿ ಪಾಲ್ಗೊಳ್ಳುವುದರಿಂದ ತಡೆಯುವುದು ಅಥವಾ ನಿರ್ಬಂಧಿಸುವುದು ಅಥವಾ ತಡೆಯಲು ಅಥವಾ ನಿರ್ಬಂಧಿಸಲು ಕಾರಣನಾಗುವುದು;

(vi) ಆತನ ಸಮುದಾಯದ ಯಾರೇ ಸದಸ್ಯನನ್ನು, ಆತನದೇ ಸಮುದಾಯದ ಸದಸ್ಯರು ಸಹಜವಾಗಿ ಮತ್ತು ಸಾಮಾನ್ಯವಾಗಿ ನೆರವೇರಿಸುವ ಮದುವೆ, ಶವಸಂಸ್ಕಾರ ಅಥವಾ ಇತರ ಧಾರ್ಮಿಕ ಸಮಾರಂಭಗಳು ಮತ್ತು ಪದ್ಧತಿಗಳನ್ನು ನಿರ್ವಹಿಸುವುದಕ್ಕಾಗಿನ ಹಕ್ಕನ್ನು ನಿರಾಕರಿಸುವುದು ಅಥವಾ ತಿರಸ್ಕರಿಸುವುದು ಅಥವಾ ನಿರಾಕರಿಸಲು ಅಥವಾ ತಿರಸ್ಕರಿಸಲು ಕಾರಣನಾಗುವುದು;

(vii) ಯಾವುದೇ ಆಧಾರಗಳ ಮೇಲೆ ಸಾಮಾಜಿಕ ಬಹಿಷ್ಕಾರ ಎಸಗುವುದು ಅಥವಾ ಎಸಗಲು ಕಾರಣನಾಗುವುದು;

(viii) ಆತನ ಸಮುದಾಯದ ಯಾರೇ ಸದಸ್ಯನನ್ನು ಸಮಾಜದಲ್ಲಿ ತೊಡಗಿಸಿಕೊಳ್ಳುವುದರಿಂದ ದೂರವಿರಿಸುವುದು ಅಥವಾ ತಿರಸ್ಕರಿಸುವುದು ಅಥವಾ ಅಂಥ ಸದಸ್ಯನೊಂದಿಗಿನ ಸಾಮಾಜಿಕ ಅಥವಾ ವ್ಯಾವಹಾರಿಕ ಬಂಧಗಳನ್ನು ಕಡಿಯುವ ಮೂಲಕ ಅಂಥ ಸದಸ್ಯನ ಬದುಕು ನಿಕೃಷ್ಟವಾಗಲು ಕಾರಣನಾಗುವುದು;

(ix) ಆತನ ಸಮುದಾಯದ ಯಾರೇ ಸದಸ್ಯನನ್ನು ಆತನದೇ ಸಮುದಾಯವು ಧರ್ಮಾದಾಯ ದತ್ತಿ, ಧಾರ್ಮಿಕ ಅಥವಾ ಸಾರ್ವಜನಿಕ ಉದ್ದೇಶಕ್ಕಾಗಿ ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಅಂಥ ಸಮುದಾಯದ ನಿಧಿಗಳಿಂದ ಆ ಸಮುದಾಯದ ಪರವಾಗಿ ಸ್ಥಾಪಿಸಿದ ಅಥವಾ ನಿರ್ವಹಿಸುತ್ತಿರುವ ಅಥವಾ ಬಳಸುತ್ತಿರುವ ಅಥವಾ ಬಳಸಲು ಉದ್ದೇಶಿಸಿರುವ ಮತ್ತು ಆತನದೇ ಸಮುದಾಯದ ಯಾರೇ ಇತರ ಸದಸ್ಯರು ಸಾಮಾನ್ಯವಾಗಿ ಬಳಸಲು ಲಭ್ಯವಿರುವ ಯಾವುದೇ ಸ್ಥಳಕ್ಕೆ ಪ್ರವೇಶಿಸುಕ್ಕೆ ತಡೆಯುವುದು ಅಥವಾ ನಿರ್ಬಂಧಿಸುವುದು ಅಥವಾ ತಡೆಯಲು ಅಥವಾ ನಿರ್ಬಂಧಿಸಲು ಕಾರಣನಾಗುವುದು.

(x) ಆತನ ಸಮುದಾಯದ ಯಾರೇ ಸದಸ್ಯನನ್ನು ಯಾವುದೇ ಶಾಲೆ, ಶೈಕ್ಷಣಿಕ ಸಂಸ್ಥೆ, ವೈದ್ಯಕೀಯ ಸಂಸ್ಥೆ, ಸಮುದಾಯ ಸಭಾಂಗಣ, ಕ್ಲಬ್ ಹಾಲ್, ಸ್ಮಶಾನ, ಸಮಾಧಿ ಸ್ಥಳ ಅಥವಾ ಆತನ ಸಮುದಾಯವು ಬಳಸುವ ಅಥವಾ ಬಳಸಲು ಉದ್ದೇಶಿಸಿರುವ ಯಾವುದೇ ಇತರ ಸ್ಥಳ ಅಥವಾ ಯಾವುದೇ ಇತರ ಸಾರ್ವಜನಿಕ ಸ್ಥಳದ ಸೌಲಭ್ಯ ಒದಗಿಸುವುದನ್ನು ಅಥವಾ ಬಳಸುವುದನ್ನು ತಡೆಯುವುದು ಅಥವಾ ನಿರ್ಬಂಧಿಸುವುದು ಅಥವಾ ತಡೆಯಲು ಅಥವಾ ನಿರ್ಬಂಧಿಸಲು ಕಾರಣನಾಗುವುದು;

(xi) ಆತನ ಸಮುದಾಯದ ಯಾರೇ ಸದಸ್ಯನನ್ನು ಆತನ ಸಮುದಾಯದ ಪ್ರಯೋಜನಕ್ಕಾಗಿ ರಚಿಸಲಾದ ಧರ್ಮಾದಾಯ ನ್ಯಾಸದ (charitable trust) ಅಡಿಯಲ್ಲಿ ಯಾವುದೇ ಪ್ರಯೋಜನವನ್ನು ಪಡೆಯುವುದನ್ನು ತಡೆಯುವುದು ಅಥವಾ ನಿರ್ಬಂಧಿಸುವುದು ಅಥವಾ ತಡೆಯಲು ಅಥವಾ ನಿರ್ಬಂಧಿಸಲು ಕಾರಣನಾಗುವುದು;

(xii) ಆತನ ಸಮುದಾಯದ ಯಾರೇ ಸದಸ್ಯನನ್ನು ನೇರವಾಗಿ ಅಥವಾ ಪರೋಕ್ಷವಾಗಿ, ಆತನ ಸಮುದಾಯದ ಯಾರೇ ಸದಸ್ಯ ಅಥವಾ ಇತರ ಸದಸ್ಯರೊಂದಿಗೆ ಸಾಮಾಜಿಕ, ಧಾರ್ಮಿಕ, ವೃತ್ತಿಪರ ಅಥವಾ ವ್ಯಾಪಾರ ಸಂಬಂಧಗಳನ್ನು ಕಡಿದುಕೊಳ್ಳಲು ಪ್ರಚೋದಿಸುವುದು ಅಥವಾ ಉತ್ತೇಜಿಸುವುದು;

(xiii) ಆತನ ಸಮುದಾಯದ ಯಾರೇ ಸದಸ್ಯನನ್ನು ಆತನ ಸಮುದಾಯದ ಸದಸ್ಯರಿಗೆ ಸಾಮಾನ್ಯವಾಗಿ ಮುಕ್ತವಾಗಿರುವ ಯಾವುದೇ ಪೂಜಾ ಸ್ಥಳ ಅಥವಾ ತೀರ್ಥಕ್ಷೇತ್ರ ಪ್ರವೇಶಿಸುವುದನ್ನು, ಅದರಲ್ಲಿ ತಂಗುವುದನ್ನು ಅಥವಾ ಅನ್ಯಥಾ ರೀತಿಯಲ್ಲಿ ಬಳಸುವುದನ್ನು ತಡೆಯುವುದು ಅಥವಾ ನಿರ್ಬಂಧಿಸುವುದು ಅಥವಾ ತಡೆಯಲು ಅಥವಾ ನಿರ್ಬಂಧಿಸಲು ಕಾರಣನಾಗುವುದು;

(xiv) ಆತನ ಸಮುದಾಯದ ಯಾರೇ ಸದಸ್ಯನನ್ನು ಆತನ ಇತರ ಸದಸ್ಯರೊಂದಿಗೆ ಸಾಮಾನ್ಯವಾಗಿ ಸ್ಥಾಪಿಸಲಾದ ಅಥವಾ ನಿರ್ವಹಿಸಲಾಗುತ್ತಿರುವ ಅಂಥ ಸಾಮಾಜಿಕ, ವೃತ್ತಿಪರ ಅಥವಾ ವ್ಯಾಪಾರ ಸಂಬಂಧ ಸ್ಥಾಪಿಸುವುದನ್ನು ಅಥವಾ ನಿರ್ವಹಿಸುವುದನ್ನು ತಡೆಯುವುದು ಅಥವಾ ನಿರ್ಬಂಧಿಸುವುದು ಅಥವಾ ತಡೆಯಲು ಅಥವಾ ನಿರ್ಬಂಧಿಸಲು ಕಾರಣನಾಗುವುದು;

(xv) ಆತನ ಸಮುದಾಯದ ಯಾರೇ ಮಕ್ಕಳು ನಿರ್ದಿಷ್ಟ ಕುಟುಂಬದ ಅಥವಾ ಸಮುದಾಯದ ಇತರ ಕುಟುಂಬಗಳ ಮಕ್ಕಳೊಂದಿಗೆ ಒಟ್ಟಿಗೆ ಆಟವಾಡುವುದನ್ನು ತಡೆಯುವುದು ಅಥವಾ ನಿರ್ಬಂಧಿಸುವುದು ಅಥವಾ ತಡೆಯಲು ಅಥವಾ ನಿರ್ಬಂಧಿಸಲು ಕಾರಣನಾಗುವುದು;

(xvi) ಆತನ ಸಮುದಾಯದ ಯಾರೇ ಸದಸ್ಯನನ್ನು ಮಾನವ ಹಕ್ಕುಗಳನ್ನು ಪಡೆಯುವುದನ್ನು ನಿರ್ಬಂಧಿಸುವುದು ಅಥವಾ ನಿರಾಕರಿಸುವುದು ಅಥವಾ ನಿರ್ಬಂಧಿಸಲು ಅಥವಾ ನಿರಾಕರಿಸಲು ಕಾರಣನಾಗುವುದು;

(xvii) ನೈತಿಕತೆ, ಸಾಮಾಜಿಕ ಸ್ವೀಕಾರ, ರಾಜಕೀಯ ಒಲವು, ಲಿಂಗತ್ವ ಅಥವಾ ಯಾವುದೇ ಇತರ ಆಧಾರದ ಮೇಲೆ ಸಮುದಾಯದ ಸದಸ್ಯರ ನಡುವೆ ತಾರತಮ್ಯವನ್ನು ಉಂಟುಮಾಡುವುದು ಅಥವಾ ತಾರತಮ್ಯವನ್ನು ಉಂಟುಮಾಡಲು ಕಾರಣನಾಗುವುದು;

(xviii) ಸಾಂಸ್ಕೃತಿಕ ಅಡಚಣೆಯನ್ನು ಸೃಷ್ಟಿಸುವುದು ಅಥವಾ ಸೃಷ್ಟಿಗೆ ಕಾರಣವಾಗುವುದು ಅಥವಾ ಆತನ ಸಮುದಾಯದ ಯಾರೇ ಸದಸ್ಯನನ್ನು ಯಾವುದೇ ನಿರ್ದಿಷ್ಟ ರೀತಿಯ ಬಟ್ಟೆಗಳನ್ನು ಧರಿಸಲು ಅಥವಾ ಯಾವುದೇ ನಿರ್ದಿಷ್ಟ ಭಾಷೆಯನ್ನು ಬಳಸಲು ಒತ್ತಾಯಿಸುವುದು;

(xix) ಆತನ ಸಮುದಾಯದ ಯಾರೇ ಸದಸ್ಯನನ್ನು ಸದರಿ ಸಮುದಾಯದಿಂದ ಹೊರಹಾಕುವುದು ಅಥವಾ ಹೊರಹಾಕಲು ಕಾರಣನಾಗುವುದು; ಮತ್ತು

(xx) ಸಾಮಾಜಿಕ ಬಹಿಷ್ಕಾರಕ್ಕೆ ಸಮಾನವಾದ ಯಾವುದೇ ಇತರ ಕೃತ್ಯಗಳನ್ನು ಎಸಗುವುದು.

**4. ಸಾಮಾಜಿಕ ಬಹಿಷ್ಕಾರದ ನಿಷೇಧ.-** ಸಾಮಾಜಿಕ ಬಹಿಷ್ಕಾರವನ್ನು ಈ ಮೂಲಕ ನಿಷೇಧಿಸಲಾಗಿದೆ ಹಾಗೂ ಅದನ್ನು ಮಾಡುವುದು ಮತ್ತು ಆಚರಿಸುವುದು ಅಪರಾಧವಾಗಿರತಕ್ಕದ್ದು.

**5. ಸಾಮಾಜಿಕ ಬಹಿಷ್ಕಾರಕ್ಕೆ ಶಿಕ್ಷೆ.-** ಯಾರೇ ವ್ಯಕ್ತಿಯು ತನ್ನ ಸಮುದಾಯದ ಯಾರೇ ವ್ಯಕ್ತಿಯ ಮೇಲೆ ಯಾವುದೇ ಸಾಮಾಜಿಕ ಬಹಿಷ್ಕಾರವನ್ನು ಹೇರಿದರೆ ಅಥವಾ ಹೇರಲು ಕಾರಣನಾದರೆ ಅಥವಾ ಆಚರಿಸಿದರೆ, ಅಪರಾಧ ನಿರ್ಣೀತನಾದ ಮೇಲೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸಅಥವಾ ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆ ಇವೆರಡರಲ್ಲಿ ಯಾವುದೇ ಪ್ರಕಾರದ ಅಥವಾ ಇವರೆಡರಿಂದಲೂ ದಂಡಿತನಾಗತಕ್ಕದ್ದು.

**ವಿವರಣೆ I.-** ವ್ಯಕ್ತಿಯು ತನ್ನ ಅಧಿಕಾರವನ್ನು ಬಳಸಿ ಅಥವಾ ಬಳಸಲು ಕಾರಣವಾಗಿ ಸಾಮಾಜಿಕ ಬಹಿಷ್ಕಾರ ವಿಧಿಸುವುದಕ್ಕಾಗಿ ಜಾತಿ ಪಂಚಾಯಿತಿಯ ಸಭೆಗಳಲ್ಲಿ ಮತಚಲಾಯಿಸಲು ಅದರ ಇತರ ಸದಸ್ಯರನ್ನು ಪ್ರಭಾವಿಸಿ, ಅಂಥ ಸಭೆಯಲ್ಲಿ ಉಪಸ್ಥಿತನಾಗಿಲ್ಲದಿದ್ದರೂ ಸಹ ಈ ಪ್ರಕರಣದಡಿ ಅಪರಾಧ ಮಾಡಿರುವುದಾಗಿ ಭಾವಿಸತಕ್ಕದ್ದು.

**ವಿವರಣೆ II.-** ಜಾತಿ ಪಂಚಾಯಿತಿ ಸಭೆಯು ನಡೆದಾಗ, ಸಾಮಾಜಿಕ ಬಹಿಷ್ಕಾರ ವಿಧಿಸುವ ನಿರ್ಣಯವನ್ನು ಮಾಡಿ, ಅಂಥ ನಿರ್ಣಯವನ್ನು ಹೊರಡಿಸಿದಾಗ, ಸಭೆಯ ಅಂಥ ನಿರ್ಣಯ ಅಥವಾ ಆಚರಣೆಯ ಚರ್ಚೆಗಳ ಪರವಾಗಿ ಮತಚಲಾಯಿಸಿದ ಪ್ರತಿ ಸದಸ್ಯನು ಈ ಪ್ರಕರಣದಡಿ ಅಪರಾಧ ಮಾಡಿರುವುದಾಗಿ ಭಾವಿಸತಕ್ಕದ್ದು.

**6. ಸಾಮಾಜಿಕ ಬಹಿಷ್ಕಾರ ವಿಧಿಸುವುದಕ್ಕಾಗಿ ಸಭೆ ಸೇರು  ದರ ನಿಷೇಧ.-** ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಯಾವುದೇ ಸಮಯದಲ್ಲಿ ಮತ್ತು ಯಾವುದೇ ಸ್ಥಳದಲ್ಲಿ ಸಮುದಾಯದ ಯಾರೇ ಸದಸ್ಯನ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ವಿಧಿಸುವ ವಿಷಯದ ಮೇಲೆ ಅಭಿಪ್ರಾಯ ಅಥವಾ ಉದ್ದೇಶಪೂರ್ವಕ ಚರ್ಚೆಯೊಂದಿಗೆ ಒಟ್ಟುಗೂಡುವುದು, ಸಭೆ ಸೇರುವುದು ಅಥವಾ ಗುಂಪುಗೂಡುವುದನ್ನು ಮಾಡತಕ್ಕದ್ದಲ್ಲ; ಅಂಥ ಒಟ್ಟುಗೂಡುವಿಕೆ, ಸಭೆ ಸೇರುವಿಕೆ ಅಥವಾ ಗುಂಪುಗೂಡುವಿಕೆಯನ್ನು ಕಾನೂನುಬಾಹಿರ ಸಭೆ ಸೇರುವಿಕೆಯಂತೆ ಪರಿಗಣಿಸತಕ್ಕದ್ದು ಹಾಗೂ  ಅಂಥ ಸಭೆ ಸೇರುವಿಕೆಯನ್ನು ಕರೆದಿರುವ ಅಥವಾ ಸಂಘಟಿಸಿರುವ ಪ್ರತಿ ವ್ಯಕ್ತಿಯನ್ನು ಮತ್ತು ಅದರಲ್ಲಿ ಭಾಗವಹಿಸಿರುವ ಅದರ ಪ್ರತಿ ಸದಸ್ಯನು ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**7. ಅಪರಾಧಕ್ಕೆ ನೆರವಾಗುವ ಅಥವಾ ದುಷ್ಪ್ರೇರಿಸುವುದಕ್ಕಾಗಿ ದಂಡನೆ.-** 4ನೇ ಪ್ರಕರಣದಡಿಯ ಅಪರಾಧ ಮಾಡಲು ನೆರವು ಅಥವಾ ದುಷ್ಪ್ರೇರಣೆ ನೀಡಿದ ಯಾರೇ ವ್ಯಕ್ತಿಯು ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸದೊಂದಿಗೆ ಅಥವಾ ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

**8. ಹಿಂದಿನ ಸಾಮಾಜಿಕ ಬಹಿಷ್ಕಾರದ ಕ್ರಿಯೆಗಳ ಅನೂರ್ಜಿತಗೊಳ್ಳುವಿಕೆ.-** (1) ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಂದು, ಅಂಥ ಪ್ರಾರಂಭವು ಜಾರಿಗೆ ಬಂದ ದಿನಾಂಕದೊಂದಿಗೆ, ಯಾವುದೇ ಸಾಮಾಜಿಕ ಬಹಿಷ್ಕಾರದ ಕ್ರಿಯೆಯು ಅನೂರ್ಜಿತಗೊಳ್ಳತಕ್ಕದ್ದು ಮತ್ತು ಪರಿಣಾಮಕಾರಿಯಾಗತಕ್ಕದ್ದಲ್ಲ.

(2) ಸಾಮಾಜಿಕ ಬಹಿಷ್ಕಾರ ವಿಧಿಸುವ ಅಥವಾ ವಿಧಿಸಲು ಕಾರಣವಾಗುವ ಯಾವುದೇ ಜಾತಿ ಪಂಚಾಯಿತಿಯು 4ನೇ ಪ್ರಕರಣದಡಿ ಅಪರಾಧ ಮಾಡಿರುವುದಾಗಿ ಭಾವಿಸತಕ್ಕದ್ದು ಹಾಗೂ 5ನೇ ಪ್ರಕರಣದಡಿ ದಂಡನೆಗೆ ಹೊಣೆಗಾರನಾಗತಕ್ಕದ್ದು.

**9. ದಂಡನೆಗೆ ಮೊದಲು ಸಂತ್ರಸ್ತನ ಕೇಳುವಿಕೆ.-** ಆಪಾದಿತನ ಅಪರಾಧ ನಿರ್ಣಯವಾದರೆ, ನ್ಯಾಯಾಲಯವು ದಂಡನೆಯ ಪ್ರಮಾಣವನ್ನು ಸಂತ್ರಸ್ತನಿಗೆ ಕೇಳತಕ್ಕದ್ದು ಮತ್ತು ತರುವಾಯ ಮಾತ್ರ ದಂಡನೆಯನ್ನು ಹೊರಡಿಸತಕ್ಕದ್ದು.

**10. ಅಪರಾಧಗಳ ಸಂಜ್ಞೇಯತೆ ಮತ್ತು ಜಾಮೀನೀಯತೆ.-** ಈ ಅಧಿನಿಯಮದಡಿಯ ಯಾವುದೇ ದಂಡನೀಯ ಅಪರಾಧವು ಸಂಜ್ಞೇಯವಾಗಿರಕ್ಕದ್ದು ಮತ್ತು ಜಾಮೀನೀಯವಾಗಿರತಕ್ಕದ್ದು ಹಾಗೂ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರಿಂದ ಅಧಿವಿಚಾರಣೆ ನಡೆಯತಕ್ಕದ್ದು.

**11. ಅಪರಾಧದ ರಾಜಿಮಾಡಿಕೊಳ್ಳುವಿಕೆ.-** ಈ ಅಧಿನಿಯಮದಡಿ ದಂಡನೀಯವಾದ ಅಪರಾಧವನ್ನು, ಸಂತ್ರಸ್ತನ ಸಮ್ಮತಿಯೊಂದಿಗೆ ಹಾಗೂ ನ್ಯಾಯಾಲಯದ ಅನುಮತಿಯೊಂದಿಗೆ ರಾಜಿಮಾಡಿಕೊಳ್ಳಬಹುದು:

ಪರಂತು, ಆಪಾದಿತ ವ್ಯಕ್ತಿಯು ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸುವಂಥ ಸಮುದಾಯ ಸೇವೆಗಳನ್ನು ನಿರ್ವಹಿಸುವ ಷರತ್ತಿಗೊಳಪಟ್ಟು, ನ್ಯಾಯಾಲಯವು ಅಪರಾಧಗಳ ರಾಜಿಗಾಗಿ ಆದೇಶದ ಮೂಲಕ ಅನುಮತಿಯನ್ನು ನೀಡತಕ್ಕದ್ದ.

**12. ದೂರು ಸ್ವೀಕರಿಸಿದ ತರುವಾಯ ಅನುಸರಿಸಬೇಕಾದ ಕಾರ್ಯವಿಧಾನ.-** (1) ಸಂತ್ರಸ್ತ ಅಥವಾ ಆತನ ಕುಟುಂಬದ ಯಾರೇ ಸದಸ್ಯ ಪೊಲೀಸರಿಗೆ ಅಥವಾ ನೇರವಾಗಿ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರಿಗೆ ದೂರನ್ನು ದಾಖಲಿಸಬಹುದು.

(2) ಉಪಪ್ರಕರಣ (1)ರಡಿ ಯಾರ ಮುಂದೆ ದೂರು ದಾಖಲಿಸಲಾಗಿದೆಯೋ ಆ ಮ್ಯಾಜಿಸ್ಟ್ರೇಟರು ಪೊಲೀಸರಿಗೆ ತನಿಖೆ ನಡೆಸಲು ನಿರ್ದೇಶಿಸಬಹುದು.

(3) ಮ್ಯಾಜಿಸ್ಟ್ರೇಟರು ಅಧಿವಿಚಾರಣೆಯು ಮುಕ್ತಾಯವಾಗುವರೆಗೆ ಸಂತ್ರಸ್ತ ಅಥವಾ ಆತನ ಕುಟುಂಬಕ್ಕೆ, ಆತನು ಸೂಕ್ತವೆಂದು ಭಾವಿಸುವ ಯಾವುದೇ ವಿಧದ ನೆರವು ಅಥವಾ ಸಹಾಯವನ್ನು ಒದಗಿಸುವಂತೆ ಸಹ ಪೊಲೀಸರು ಅಥವಾ ಇತರ ಸಂಬಂಧಿತ ಪ್ರಾಧಿಕಾರಕ್ಕೆ ನಿರ್ದೇಶಿಸಬಹುದು.

**13. ಕ್ರಮ ಕೈಗೊಳ್ಳುವ ಪೊಲೀಸ್ ಅಧಿಕಾರಿ.-** ಈ ಅಧಿನಿಯಮದಡಿ ಸಾಮಾಜಿಕ ಬಹಿಷ್ಕಾರದ ಅಪರಾಧದ ಮಾಹಿತಿಯನ್ನು ಸ್ವೀಕರಿಸಿದ ತರುವಾಯ ಪೊಲೀಸ್ ಅಧಿಕಾರಿಯು,-

(ಎ) ಯಾವುದೇ ಸ್ಥಳದಲ್ಲಿ ನಿರ್ಮಿಸಲಾದ ಅಥವಾ ಇರಿಸಲಾದ ಯಾವುದೇ ಅಡ್ಡಿ ಅಥವಾ ತಡೆಯನ್ನು ಈ ಅಧಿನಿಯಮದಡಿ ಅಪರಾಧವನ್ನು ಮಾಡುವ ಉದ್ದೇಶಕ್ಕಾಗಿ ಬಳಸಲಾಗಿದೆಯೆಂಬುದನ್ನು ನಂಬಲು ಅಂಥ ಪೊಲೀಸ್ ಅಧಿಕಾರಿಯು ಯುಕ್ತ ಆಧಾರವನ್ನು ಹೊಂದಿದ್ದರೆ, ಹಾಗೆ ನಿರ್ಮಿಸಿದ ಅಥವಾ ಇರಿಸಲಾದ ಅಡ್ಡಿ ಅಥವಾ ತಡೆಯನ್ನು  ತೆಗೆಯಬಹುದು ಅಥವಾ ತೆಗೆಯಲು ಕಾರಣವಾಗಬಹುದು; ಅಥವಾ

(ಬಿ) ಈ ಅಧಿನಿಯಮದಡಿ ಅಪರಾಧವನ್ನು ಮಾಡುವ ಉದ್ದೇಶಕ್ಕಾಗಿ ಅಂಥ ಗೇಟು ಅಥವಾ ಬಾಗಿಲನ್ನು ಮುಚ್ಚಲಾಗಿದೆಯೆಂದು ನಂಬಲು ಅಂಥ ಪೊಲೀಸ್ ಅಧಿಕಾರಿಯು ಯುಕ್ತ ಆಧಾರವನ್ನು ಹೊಂದಿದ್ದರೆ, ಯಾವುದೇ ಗೇಟು ಅಥವಾ ಬಾಗಿಲನ್ನು ತೆರೆಯಬಹುದು ಅಥವಾ ತೆರೆಯಲು ಕಾರಣವಾಗಬಹುದು.

**14. ಕೆಲವು ಕಾರ್ಯಗಳನ್ನು ತಡೆಯುವ ಅಧಿಕಾರ.-** (1) ಸಾಮಾಜಿಕ ಬಹಿಷ್ಕಾರ ವಿಧಿಸುವುದಕ್ಕಾಗಿ ಕಾನೂನು ಬಾಹಿರ ಸಭೆ ಕರೆಯುವ ಸಾಧ್ಯತೆಯಿರುವುದೆಂದು ಮಾಹಿತಿಯನ್ನು ಜಿಲ್ಲಾಧಿಕಾರಿಯು ಸ್ವೀಕರಿಸಿದಾಗ, ಆದೇಶದ ಮೂಲಕ ಆತನು,  ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವುದೇ ಪ್ರದೇಶದಲ್ಲಿ ಯಾರೇ ವ್ಯಕ್ತಿಯು ಅಂಥ ಕಾನೂನು ಬಾಹಿರ ಸಭೆ ಕರೆಯುವುದನ್ನು ಹಾಗೂ ಈ ಅಧಿನಿಯಮದಡಿ ಯಾವುದೇ ಅಪರಾಧ ಎಸಗುವ ಅಂಥ ಯಾವುದೇ ಕಾರ್ಯ ಮಾಡುವುದನ್ನು ನಿಷೇಧಿಸತಕ್ಕದ್ದು.

(2) ಜಿಲ್ಲಾಧಿಕಾರಿಯು ಪೊಲೀಸ್ ಪ್ರಾಧಿಕಾರಗಳಿಗೆ ಸೂಕ್ತ ನೀರ್ದೇಶನಗಳನ್ನು ನೀಡುವುದನ್ನು ಒಳಗೊಂಡು, ಅಂಥ ಆದೇಶಕ್ಕೆ ಪರಿಣಾಮ ನೀಡಲು ಆತನು ಅವಶ್ಯಕವೆಂದು ಭಾವಿಸುವಂಥ ಕ್ರಮಗಳನ್ನು ತೆಗೆದುಕೊಳ್ಳಬಹುದು.

**15. ಸಾಮಾಜಿಕ ಬಹಿಷ್ಕಾರ ನಿಷೇಧ ಅಧಿಕಾರಿ.-** ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಸರ್ಕಾರದ 'ಎ' ದರ್ಜೆಗೆ ಕಡಿಮೆಯಲ್ಲದ ಅಧಿಕಾರಿಯನ್ನು ತಾನು ಅವಶ್ಯಕವೆಂದು ಪರಿಗಣಿಸಬಹುದಾದಂತೆ  ಸಾಮಾಜಿಕ ಬಹಿಷ್ಕಾರ ನಿಷೇಧ ಅಧಿಕಾರಿಯಾಗಿ ಗೊತ್ತುಪಡಿಸಬಹುದು ಹಾಗೂ

ಆತನು ಯಾವ ಪ್ರದೇಶ ಅಥವಾ ಪ್ರದೇಶಗಳೊಳಗೆ ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದೆಂದು ಅಧಿಸೂಚಿಸಬಹುದು.

**16. ಸಾಮಾಜಿಕ ಬಹಿಷ್ಕಾರ ಅಧಿಕಾರಿಯ ಪ್ರಕಾರ್ಯಗಳು.-** ಸಾಮಾಜಿಕ ಬಹಿಷ್ಕಾರ ಅಧಿಕಾರಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:-

(ಎ) ತನ್ನ ಅಧಿಕಾರವ್ಯಾಪ್ತಿಯ ಪ್ರದೇಶದಲ್ಲಿ ಯಾರೇ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳಡಿ ಅಪರಾಧ ಮಾಡಿರುವುದನ್ನು ಪತ್ತೆಹಚ್ಚುವುದು, ತಾನು ಸೂಕ್ತವೆಂದು ಬಾವಿಸುವಂಥ ಕ್ರಮವನ್ನು ತೆಗೆದುಕೊಳ್ಳುವುದು ಮತ್ತು ಅಂಥ ಪ್ರಕರಣಗಳನ್ನು ಮ್ಯಾಜಿಸ್ಟ್ರೇಟರಿಗೆ ಮತ್ತು ಜಿಲ್ಲಾಧಿಕಾರಿಗೆ ವರದಿಮಾಡುವುದು;

(ಬಿ) ಈ ಅಧಿನಿಯಮದಡಿ ಅಪರಾಧಗಳನ್ನು ಮತ್ತು ಅದರ ವ್ಯವಹರಣೆಗಳನ್ನು ಅಧಿವಿಚಾರಣೆ ಮಾಡುವಾಗ ಮ್ಯಾಜಿಸ್ಟ್ರೇಟರಿಗೆ ನೆರವುನೀಡುವುದು.

**17. ಸಂತ್ರಸ್ತನಿಗೆ ಪರಿಹಾರ ನೀಡಿಕೆ.-** ನ್ಯಾಯಾಲಯವು, ತೀರ್ಪನ್ನು ಹೊರಡಿಸುವಾಗ, ಜುಲ್ಮಾನೆಯ ದಂಡನೆಯನ್ನು ವಿಧಿಸುವಾಗ, ವಸೂಲಾದ ಜುಲ್ಮಾನೆಯ ಪೂರ್ಣ ಅಥವಾ ಭಾಗವನ್ನು ಸಂತ್ರಸ್ತ ಅಥವಾ ಆತನ ಕುಟುಂಬಕ್ಕೆ ಪರಿಹಾರವಾಗಿ ನೀಡಲು ಆದೇಶಿಸಬಹುದು.

**18. ಅಧಿನಿಯಮವು ಇತರ ಯಾವುದೇ ಕಾನೂನನ್ನು ಅಲ್ಪೀಕರಿಸುವುದಿಲ್ಲ.-** ಈ ಅಧಿನಿಯಮದ ಉಪಬಂಧಗಳು ಹೆಚ್ಚುವರಿಯಾಗಿರತಕ್ಕದ್ದು ಹಾಗೂ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳನ್ನು ಅಲ್ಪೀಕರಿಸುವುದಿಲ್ಲ.

**19. ಭಾರತೀಯ ನ್ಯಾಯ ಸಂಹಿತೆ, 2023ರಡಿ ಆರೋಪಗಳ ರಚನೆ.-** ಈ ಅಧಿನಿಯಮದಡಿ ಅಪರಾಧಕ್ಕಾಗಿ ಆರೋಪಗಳನ್ನು ರೂಪಿಸುವಾಗ ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45) ರ 3(5), 61(1), 61(2), 190, 196, 308(1) ರಿಂದ (6) ಮತ್ತು 62ನೇ ಪ್ರಕರಣಗಳಡಿ ಅಪರಾಧ ಮಾಡಿರುವುದನ್ನು ಸಂಗತಿಯು ತಿಳಿಯಪಡಿಸಿದರೆ ಮ್ಯಾಜಿಸ್ಟ್ರೇಟರು ಅವುಗಳಡಿಯಲ್ಲಿಯೂ ಸಹ ಆರೋಪಗಳನ್ನು ರೂಪಿಸಬಹುದು.

**20. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಪೂರ್ವಪ್ರಕಟಣೆಯ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅಥವಾ ಅಧಿಸೂಚನೆಯನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು

ಅಥವಾ ಅಧಿಸೂಚನೆಯನ್ನು ಮಾಡಕೂಡದೆಂದು ಎರಡೂ ಸದನಗಳೂ ಒಪ್ಪಿದರೆ ಆ ನಿಯಮವು ಅಥವಾ ಅಧಿಸೂಚನೆಯು ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಆ ಮಾರ್ಪಾಟನ್ನು ಅಥವಾ ರದ್ದತಿಯನ್ನು ಅಧಿಸೂಚಿಸಿದ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದು ಅಥವಾ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**21. ತೊಂದರೆಗಳನ್ನು ನಿವಾರಿಸುವ ಅಧಿಕಾರ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಾಗ, ಯಾವುದೇ ತೊಂದರೆಗಳು ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ತೊಂದರೆಗಳನ್ನು ನಿವಾರಿಸುವ ಉದ್ದೇಶಕ್ಕಾಗಿ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧಗಳನ್ನು ಕಲ್ಪಿಸಬಹುದು :

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಉಪ-ಪ್ರಕರಣ (1)ರಡಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ರಾಜ್ಯದಲ್ಲಿ ಅಸಂವಿಧಾನಿಕ ಆಚರಣೆಗಳಾದಂಥ ಬಹಿಷ್ಕಾರ, ನ್ಯಾಯಾಲಯದ ಹೊರಗಿನ ಸಂಸ್ಥೆಗಳಾದಂಥ ಜಾತಿ ಅಥವಾ ಸಮುದಾಯ ಪಂಚಾಯತಿಗಳು ಮುಂತಾದವು ವಿವಿಧ ಶಿಕ್ಷೆಗಳ ಹೇರಿಕೆಯನ್ನು ವಿವಿಧ ಸಮುದಾಯಗಳು ಇನ್ನೂ ಆಚರಿಸುತ್ತಿರುವುದು ಗಮನಕ್ಕೆ ಬಂದಿದ್ದು, ಇದರ ಪರಿಣಾಮವಾಗಿ ಘನತೆಯಿಂದ ಜೀವನ ನಡೆಸುವ ವ್ಯಕ್ತಿಗಳಿಗೆ ಮತ್ತು ಗುಂಪುಗಳಿಗೆ ತುಂಬಾ ಕಿರುಕುಳವಾಗುತ್ತಿದೆ. ಇದರಿಂದ ಸಮುದಾಯದ ಸಾಮಾಜಿಕ ಜೀವನದ ಮೇಲೆ ವ್ಯತಿರಿಕ್ತ ಪರಿಣಾಮಗಳಾಗುತ್ತಿದೆ ಹಾಗೂ ಸಮಾಜದಲ್ಲಿ ಅನಾರೋಗ್ಯಕರ ಭಾವನೆಗಳು ಮತ್ತು ಅಸೌಹಾರ್ದತೆ ಉಂಟಾಗುತ್ತಿದೆ. ಆದ್ದರಿಂದ ಈ ಕೆಟ್ಟ ಮತ್ತು ಅಸಂವಿಧಾನಿಕ ಆಚರಣೆಗಳನ್ನು ಸಮಾಜದಿಂದ ನಿರ್ಮೂಲನ ಮಾಡುವುದು ಅವಶ್ಯಕವಾಗಿದೆ.

ಅಂಥ ಆಚರಣೆಗಳೊಂದಿಗೆ ವ್ಯವಹರಿಸಲು ಪ್ರಸ್ತುತವಿರುವ ಕಾನೂನುಗಳು ಸಾಕಾಗುತ್ತಿಲ್ಲ. ಆದ್ದರಿಂದ ಸರ್ಕಾರವು ಸದರಿ ಉದ್ದೇಶಕ್ಕಾಗಿ ಶಾಸನವನ್ನು ಅಧಿನಿಯಮಿತಿಗೊಳಿಸುವುದು ಯುಕ್ತವೆಂದು ಪರಿಗಣಿಸಿದೆ. ತದನುಸಾರ ಜಾತಿ ಅಥವಾ ಸಮುದಾಯ ಪಂಚಾಯತಿಗಳು ಅಥವಾ ಇದರ ಸದಸ್ಯರ ಮೂಲಕ ವಿವಿಧ ಹಂತಗಳಲ್ಲಿ ಸಾಮಾಜಿಕ ಬಹಿಷ್ಕಾರ, ಸಾಮಾಜಿಕ ಅಸಮಾನತೆ ಮತ್ತು ಸಾಮಾಜಿಕ ಅಸಾಮರ್ಥತೆಯನ್ನು ವಿಧಿಸುವ ಕೆಟ್ಟ ಆಚರಣೆಗಳನ್ನು ಹಾಗೂ ಅಂಥ ಸಾಮಾಜಿಕ ಬಹಿಷ್ಕಾರವನ್ನು ತಡೆಯಲು ಪ್ರಸ್ತಾವಿಸಲಾಗಿದೆ. ಸಮಾಜಿಕ ಬಹಿಷ್ಕಾರ ಅಧಿಕಾರಿಯನ್ನು ನೇಮಿಸಲೂ ಸಹ ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ- 15** | ಸಾಮಾಜಿಕ ಬಹಿಷ್ಕಾರ ನಿಷೇಧ ಅಧಿಕಾರಿ ಅಧಿಕಾರಗಳನ್ನು ಚಲಾಯಿಸುವ ಮತ್ತು ಕರ್ತವ್ಯಗಳನ್ನು ನೆರವೇರಿಸುವ ಪ್ರದೇಶ ಅಥವಾ ಪ್ರದೇಶಗಳನ್ನು ಅಧಿಸೂಚಿಸಲು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ- 20** | (1)ನೇ ಉಪಖಂಡವು ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನೆಯ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

**ಡಾ. ಎಚ್.ಸಿ. ಮಹದೇವಪ್ಪ**
ಸಮಾಜ ಕಲ್ಯಾಣ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ, ಬೆಳಗಾವಿ, ಕಾಸೂ 31, ಪ್ರತಿಗಳು 500+100, 9ನೇ ಡಿಸೆಂಬರ್ 2025

**(ತಾತ್ಕಾಲಿಕವಾಗಿ ಅಂಗೀಕರಿಸಲಾಗಿದೆ)**

**ಕರ್ನಾಟಕ ವಿಧಾನ ಸಭೆ**
**ಹದಿನಾರನೇ ವಿಧಾನ ಸಭೆ**
**ಎಂಟನೇ ಅಧಿವೇಶನ**

ಶ್ರೀ ಡಾ. ಎಚ್.ಸಿ ಮಹದೇವಪ್ಪ, ಸಮಾಜ ಕಲ್ಯಾಣ ಮಂತ್ರಿಗಳು ಇವರಿಂದ, ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ವಿಧೇಯಕ, 2025 (2025ರ ಕರ್ನಾಟಕ ವಿಧಾನ ಸಭೆ ವಿಧೇಯಕ ಸಂಖ್ಯೆ: 82)ಕ್ಕೆ ತಿದ್ದುಪಡಿಗಳು.

ನಾನು, ಕರ್ನಾಟಕ ಸಾಮಾಜಿಕ ಬಹಿಷ್ಕಾರ (ಪ್ರತಿಬಂಧ, ನಿಷೇಧ ಮತ್ತು ಪರಿಹಾರ) ವಿಧೇಯಕ, 2025 (2025ರ ಕರ್ನಾಟಕ ವಿಧಾನ ಸಭೆ ವಿಧೇಯಕ ಸಂಖ್ಯೆ: 82)ಕ್ಕೆ ಈ ಮುಂದಿನ ತಿದ್ದುಪಡಿಯನ್ನು ತರುವ ನನ್ನ ಉದ್ದೇಶವನ್ನು ಈ ಮೂಲಕ ತಮ್ಮ ಗಮನಕ್ಕೆ ತರಬಯಸುತ್ತೇನೆ, ಎಂದರೆ:-

**ಖಂಡ-12**

ಸದರಿ ವಿಧೇಯಕದಲ್ಲಿ, 12ನೇ ಖಂಡದಲ್ಲಿನ (1)ನೇ ಉಪಖಂಡದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಥವಾ ನಿಯಮಿಸಬಹುದಾದ ವಿಧಾನದಲ್ಲಿ ಈ ಅಧಿನಿಯಮದಡಿಯಲ್ಲಿನ ಅಪರಾಧಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಸ್ವೀಕರಿಸಿದ ಮೇಲೆ, ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ಪೊಲೀಸ್ ಅಧಿಕಾರಿಯು ಸ್ವ ಪ್ರೇರಿತ (Suo-Moto) ಕ್ರಮವನ್ನು ಕೈಗೊಳ್ಳಬಹುದು."

**ಎಂ.ಕೆ. ವಿಶಾಲಾಕ್ಷಿ**
**ಕಾರ್ಯದರ್ಶಿ**

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**EIGHTH SESSION**

# THE KARNATAKA SOCIAL BOYCOTT (PREVENTION, PROHIBITION AND REDRESSAL) BILL, 2025

**(LA Bill No. 82 of 2025)**

A Bill to provide for the prohibition of social boycott of a person or group of persons including their family members and for matters connected therewith or incidental thereto;

Whereas promoting amongst the citizens fraternity, assuring the dignity of individual is enshrined as one of the goal in the Preamble to the Constitution of India;

And whereas the social boycott of any person or a group of persons is violation of the fundamental rights enshrined in part-III of the Constitution;

And whereas it has been observed that the inhuman practice of social boycott boycott of a person or group of persons including their family members still persists in some parts of the State;

And whereas it appears that the existing laws have been proved to be not effective in total elimination of the evil of social boycott of a person or group of persons including their family members;

And whereas it is necessary to prohibit social boycott as a matter of social reform in the interest of public welfare;

And whereas with a view to ensure that the people in the State live in harmony with their human rights, it is expedient to provide for the prohibition of social boycott of a person or group of persons including their family members, and for matters connected therewith or incidental thereto;

Be it enacted by the Karnataka Legislature in the Seventy sixth year of the Republic of India as follows:-

**1. Short title and commencement.-** (1) This Act may be called the Karnataka Social Boycott (Prevention, Prohibition and Redressal) Act, 2025.

(2) It shall come into force on such date as the State Government may, by notification, appoint.

**2. Definitions.-** (1) In this Act, unless the context otherwise requires,-

**(a) "Caste Panchayat"** means a Committee or a body formed by a group of persons belonging to any community, whether

registered or not, whether formal or informal, which functions within the community to regulate various practices in the same community, controls personal and social behavior of any member and collectively resolves or decides any disputes amongst its members including their families, by issuing oral or written dictums, whether called as a "panchayat" or by any other name or description;

(b) **"Community"** in relation to a Caste Panchayat means a group, the members of which are connected together by reason of the fact that by birth, conversion or the performance of any religious rites or ceremonies, they belong to the same religion or religious creed, caste or sub-caste;

(c) **"Social Boycott"** means the gesture or an act, whether oral or written, of any social discrimination between the members of the community specified in section 3;

(d) **"Government"** means the Government of Karnataka;

(e) **"Human rights**" shall have the same meaning as assigned to it in clause (d) of sub-section (1) of section 2 of the Protection of Human Rights Act, 1993 (Central Act 10 of 1994);

(f) **"Member"** means a person who is a member of any community;

(g) **"Prescribed"** means prescribed by rules made under this Act;

(h) **"Social Boycott Prohibition Officer"** means an officer designated as such under section 15; and

(i) **"Victim"** means an individual who has suffered or experienced physical or monetary harm or harm to his property as a result of the commission of social boycott and includes his relatives, legal guardian and legal heirs.

(2) Words and expressions used but not defined in this Act but defined in the Bharatiya Nyaya Sanhita, 2023 (Central Act 45 of 2023), the Bharatiya Sakshya Adhiniyam, 2023 (Central Act 47 of 2023), the Bharatiya Nagarik Suraksha Sanhita, 2023 (Central Act 46 of 2023) or the Protection of Human Rights Act, 1993, (Central Act 10 of 1994) as the case may be, shall be deemed to have the meaning respectively assigned to them under those enactments.

**3. Social boycott.-** Any member who commits any of the following act shall be deemed to have imposed social boycott on another member of his community, if as per the decision of caste panchayath, he-

(i) refuses to deal with, work for hire or do business with other person or;

(ii) denies opportunities including access to services or contractual opportunities for rendering service for consideration or;

(iii) refuses to do anything on the terms on which things would be commonly done in the ordinary course of business or;

(iv) abstains from the professional or business relations that one would maintain with other person or;

(v) prevents or obstructs or causes to prevent or obstructs any member of his community from observing any social or religious custom or usage or ceremony or from taking part in a social, religious or community functions, congregation, assembly, meeting or procession;

(vi) refuses or denies or causes to refuse or deny any member of his community the right to perform marriage, funeral or other religious ceremonies and rites which the members of his own community usually and ordinarily perform;

(vii) commits or causes to commit social ostracism on any grounds;

(viii) shuns or refuses any member of his community from engaging in the society or cut-off social or commercial ties with such member resulting in making the life of such member miserable;

(ix) prevents or obstructs or causes to prevent or obstruct any member of his community from having access to or from using any place used or intended to be used for a charitable, religious or public purpose which is established or maintained wholly or partly by his own community for and on behalf of the community out of the funds of such community and is normally available for use to or by any other member of his own community;

(x) prevents or obstructs or causes to prevent or obstruct any member of his community from having access to or using the facilities of any school, educational institution, medical institution, community hall, club hall, cemetery, burial ground or any other place used by, or intended to be used by, or for the benefit of, his community; or any other public place;

(xi) prevents or obstructs or causes to prevent or obstruct any member of his community from enjoying any benefit under a charitable trust created for the benefit of his community;

(xii) incites or provokes or encourages any member of his community, directly or indirectly, to sever social, religious, professional or business relations with any other member or members of his community;

(xiii) prevents or obstructs or causes to prevent or obstruct any member of his community from entering, lodging in or otherwise using any place of worship or pilgrimage, which is ordinarily open to the members of his community;

(xiv) prevents or obstructs or causes to prevent or obstruct any member of his community from establishing or maintaining such social, professional or business relations as he would ordinarily establish or maintain with other members of his community;

(xv) prevents or obstructs or causes to prevent or obstruct any children of his community from playing together with the children of specific family or families in the community;

(xvi) obstructs or denies or causes to obstruct or deny any member of his community from enjoying human rights;

(xvii) discriminates or causes to discriminate amongst the members of the community on the basis of morality, social acceptance, political inclination, sexuality or any other basis;

(xviii) creates or causes to create cultural obstacle or compel any member of his community to wear any particular type of clothes or use any specific language;

(xix) expels or causes to expel any member of his community from the said community ; and

(xx) commits any other similar acts which amount to and social boycott.

**4. Prohibition of Social boycott.-** The social boycott is hereby prohibited and its commission and practice shall be an offence.

**5. Punishment for Social boycott.-** Any person who imposes or causes to impose or practices any social boycott on any member of his community, shall, on conviction, be punished with imprisonment of either description, which may extend to three years, or with fine which may extend to one lakh rupees, or with both.

**Explanation I.—** A person who uses or causes to use his power to influence other members of the Caste Panchayat which in its meeting has voted for imposition of social boycott, though not present in such meeting shall be deemed to have committed the offence under this section.

**Explanation II.—** Where at the meeeting of the caste panchayat, the resolution to impose social boycott has been passed, every member who has voted in favour of such decision or has participated in the deliberations of the meeting, when such resolution was moved, shall be deemed to have committed the offence under this section.

**6. Prohibition on assembling for imposing social boycott.-** No person or group of persons shall gather, assemble or congregate at any time and at any place with the view or intention to deliberate on issue of imposing social boycott on any member of the community; such gathering or assembly or congregation shall be treated as an unlawful assembly and every person convening and organizing such assembly and every member thereof participating therein shall be punishable with fine which may extend to one lakh rupees.

**7. Punishment for aiding or abetting the offence.-** Every person who aids or abets the commission of an offence under section 4 shall be punished with imprisonment which may extend to three years, or with fine which may extend to one lakh rupees or with both.

**8. Previous actions of Social Boycott to be void.-** (1) Any action of social boycott, on the date of commencement of this Act shall, with effect from the date of such commencement, be void and be of no effect.

(2) Any caste Panchayat, which imposes or causes to impose social boycott shall be deemed to have committed an offence under section 4 and shall be liable to be punished under section 5.

**9. Victim to be heard on sentence.-** If the accused is convicted, the Court shall, hear the victim on the quantum of sentence and then only pass the sentence.

**10. Offences to be cognizable and bailable.-** Any offence punishable under this Act shall be cognizable and bailable and triable by a Judicial Magistrate of the first class.

**11. Compounding of offence.-** The offence punishable under this Act may, with the consent of the victim and with the permission of the court, be compounded:

Provided that, the Court shall, by an order, grant permission for compounding of offence subject to the condition of performance of such community services to be rendered by the accused person, as the court may think fit.

**12. Procedure to be followed upon receiving complaint**.- (1) The victim or any member of his family may file a complaint either to the police or directly to the Judicial Magistrate of the first class.

(2) The Magistrate before whom the complaint is filed under sub-section (1) may direct the police to conduct the investigation.

(3) The Magistrate may also direct the police and other concerned authorities to provide the victim and his family, any kind of assistance or help that he thinks necessary till the conclusion of trial.

**13. Police officer to take action.-** Upon receiving the information of the offence of social boycott under this Act a police officer may,-

(a) remove or cause to be removed, any barricade or obstruction erected or placed in any place if such police officer has reasonable ground to believe that the barricade or obstruction was so erected or placed in order to be used for the purpose of committing an offence under this Act ;or

(b) open or cause to be opened any gate or door, if such police officer has reasonable ground to believe that such gate or door

has been closed for the purpose of committing an offence under this Act.

**14. Power to prevent certain acts.-** (1) Where the Deputy Commissioner receives information that there is likelihood of convening of unlawful assembly for imposition of social boycott, he shall, by order, prohibit the convening of any such unlawful assembly and doing of any such act towards the commission of any offence under this Act by any person in any areas as may be specified in the order.

(2) The Deputy Commissioner may take such steps as he thinks necessary to give effect to such order, including giving of appropriate directions to the police authorities.

**15. Social boycott prohibition officer.-** The State Government may, by notification in the Official Gazette, designate any officer not below the rank of Group 'A' Officer of the Government, as the social boycott prohibition Officer as it may consider necessary and may also notify the area or areas within which he shall exercise the powers and perform the duties as may be prescribed.

**16. Functions of social boycott prohibition officer.-** A social boycott Prohibition Officer shall perform the following functions, namely:-

(a) to detect the commission of offence under the provisions of this Act by any person in the area of his jurisdiction, by taking such action as he deems fit and to report such cases to the Magistrate and Deputy Commissioner;

(b) to assist the Magistrate while he is trying the offences and its proceedings under this Act.

**17. Compensation to Victim.-** When a sentence of fine is imposed, the a Court may, when passing judgment, order the whole or any part of the fine recovered to be given to the victim and his family, as the compensation.

**18. Act not in derogation of any other law.-** The provisions of this Act shall be in addition to and not in derogation of the provisions of any other law for the time being in force.

**19. Framing charges under Bharatiya Nyaya Sanhita, 2023.-** While framing charges for the offences under this Act, the Magistrate may also frame charges under sections 3(5), 61 (1), 61(2), 190,196,308(1) to (6) and 62 of the Bharatiya Nyaya Sanhita, 2023 (Central Act 45 of 2023), or any other provision of that Sanhita, if the fact discloses the commission of an offence under those provisions.

**20. Power to make rules.-** (1) The State Government may, after previous publication make rules to carry out the purposes of this Act.

(2) Every rule or notification made under this Act shall be laid as soon as may be after it is made, before each House of the State Legislature while it is in session, for a total period of thirty days which may be comprised in one session or in two or more successive sessions and if before the expiry of the session immediately

following the session or the successive sessions aforesaid, both Houses agree in making any modification in the rule or notification or both Houses agree that the rule or notification should not be made, the rule or notification shall thereafter have effect only in such modified form or be of no effect as the case may be; so, however, that any such modification or annulment shall be without, prejudice to the validity of anything previously done under that rule or notification.

**21. Power to remove difficulties.-** (1) If any difficulty arises in giving effect to the provisions of this Act, the State Government may, by order published in the Official Gazette, make such provisions, not inconsistent with the provisions of this Act, which appears to it to be necessary or expedient for the purpose of removing the difficulty:

Provided that, no such order shall be made under this section after the expiry of a period of two years from the commencement of this Act.

(2) Every order made under sub-section (1) shall be laid, as soon as may be, after it is made, before each House of the State Legislature.

## STATEMENT OF OBJECTS AND REASONS

It has been observed that the unconstitutional practices such as boycotts, imposition of various punishments by extra judicial bodies such as caste or community panchayats etc., are still in practice in various communities in the State, resulting in great harassment to individuals or groups in leading their lives with dignity. This has adverse effects on the social life of the community and has given rise to ill feelings and disharmony in the society. It is therefore necessary to eradicate these evil and unconstitutional practices from the society.

The existing laws are found to be inadequate in dealing with such practices. The Government therefore considers it expedient to enact a legislation for the said purpose. It is accordingly proposed to prevent the evil practices of imposition of social boycott, social discrimination and social disabilities at various levels by caste or community panchayaths or by its members and punishment for such social boycott. It is also proposed to appoint the social boycott prohibition officer.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**MEMORANDUM REGARDING DELEGATED LEGISLATION**

| | |
|---|---|
| Clause -15 | Empowers the State Government to make rules to notify the area or areas within which the social boycott prohibition Officer shall exercise the powers and perform the duties. |
| Clause-20 | Sub-clause (1) empowers the State Government to make rules after previous publication to carry out the purposes of the Act. |

The proposed delegation of legislative power is normal in character.

**Dr. H.C.MAHADEVAPPA**
Minister for Social Welfare

**M.K. VISHALAKSHI**
Secretary
Karnataka Legislative Assembly

Govt. Press, Suvarna Soudha, Belagavi, 10th December, 2025, P7, W.D. 31, Copies 500+100

**(Provisionally admitted)**

**KARNATAKA LEGISLATIVE ASSEMBLY**
**(16th ASSEMBLY)**
**EIGHTH SESSION**

Amendments to the Karnataka Social Boycott (Prevention, Prohibition and Redressal) Bill, 2025 (L.A. Bill No.82 of 2025), by Dr. H.C Mahadevappa, Minister of Social Welfare.

I hereby give notice of my intention to move the following amendments to the Karnataka Social Boycott (Prevention, Prohibition and Redressal) Bill, 2025 (L.A. Bill No.82 of 2025), namely:-

**Clause-12**

In the said Bill, in clause 12, in sub-clause (1) at the end the following shall be inserted, namely:-

"or a Police Officer not below the rank of Inspector may initiate suo-moto action upon receipt of information regarding the offence under this Act in the manner as may be prescribed".

**M. K. VISHALAKSHI**

**Secretary**